# ಸುದ್ದಿ ಸಂಚಯ



ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಶನ್ನಿನ ಉಪಾಧ್ಯಕ್ಷರಾದ ಪರಮಪೂಜ್ಯ ಶ್ರೀಮತ್ ಸ್ವಾಮಿ ಆತ್ಮಸ್ಥಾನಂದಜಿ ಮಹಾರಾಜ್ ಅವರು ೨೦೦೩ರ ಏಪ್ರಿಲ್ ೧೬ರಿಂದ ೨೩ರವರೆಗೆ ಮೈಸೂರಿನ ಶ್ರೀರಾಮಕೃಷ್ಣ ಆಶ್ರಮಕ್ಕೆ ಭೇಟಿ ನೀಡಲಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳನ್ನು ಬಯಸುವವರು ಆಶ್ರಮದ ಕಾರ್ಯಾಲಯವನ್ನು ಸಂಪರ್ಕಿಸಬೇಕಾಗಿ ವಿನಂತಿ.

### ವಿವೇಕಾನಂದ ಆಶ್ರಮ, ಸ್ವಾಮಿ ವಿವೇಕಾನಂದ ರಸ್ತೆ, ಅಲಸೂರು, ಬೆಂಗಳೂರು - 8

ಡಿಸೆಂಬರ್ ೨೧ನೇ ಶನಿವಾರ ಆಶ್ರಮದಲ್ಲಿ ಉಚಿತ ನೇತ್ರ ಚಿಕಿತ್ಸಾ ಶಿಬಿರ ನಡೆಸಲಾಯಿತು. ಅದರಲ್ಲಿ ೨೫೯ ರೋಗಿಗಳ ಕಣ್ಣುಗಳನ್ನು ತಪಾಸಣೆ ಮಾಡಲಾಯಿತು. ೭೮ ಜನರಿಗೆ ಸುಮಾರು ೫೦,೦೦೦ ರೂಪಾಯಿ ಖರ್ಚಿನಲ್ಲಿ ಉಚಿತ ಶಸ್ತ್ರಚಿಕಿತ್ಸೆ ನಡೆಸಲಾಯಿತು.

ಡಿಸೆಂಬರ್ ೩೧ರಂದು ಸಾಧುನಿವಾಸದ ಮೊದಲನೇ ಮಹಡಿಯ ಹೊಸಕಟ್ಟಡವನ್ನು ಶ್ರೀರಾಮಕೃಷ್ಣ ಮಹಾಸಂಘದ ಮುಖ್ಯ ಕಾರ್ಯದರ್ಶಿಗಳಾದ ಶ್ರೀಮತ್ ಸ್ವಾಮಿ ಸ್ಮರಣಾನಂದಜೀ ಮಹಾರಾಜ್‌ರವರು ಉದ್ಘಾಟಿಸಿದರು. ಅದರ ಅಂಗವಾಗಿ ೩೦ರ ಸಂಜೆ ಹಾಗೂ ೩೧ರ ಬೆಳಿಗ್ಗೆ ವಿಶೇಷ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು. ಸಭೆಯನ್ನು ಉದ್ದೇಶಿಸಿ ಶ್ರೀಮತ್ ಸ್ವಾಮಿ ಸ್ಮರಣಾನಂದಜೀ ಮಹಾರಾಜ್‌ರವರು, ಶ್ರೀಮತ್ ಸ್ವಾಮಿ ಹರ್ಷಾನಂದಜಿ ಮಹಾರಾಜ್‌ರವರು, ಶ್ರೀಮತ್ ಸ್ವಾಮಿ ಪುರುಷೋತ್ತಮಾನಂದಜಿ ಮಹಾರಾಜ್‌ರವರು ಮಾತನಾಡಿದರು. ಸುಮಾರು ೮೦೦ ಭಕ್ತಾದಿಗಳು ಇದರಲ್ಲಿ ಪಾಲುಗೊಂಡರು.

ಶಾಲಾವಿದ್ಯಾರ್ಥಿಗಳಿಗಾಗಿ ನವೆಂಬರ್‌ನಿಂದ ಡಿಸೆಂಬರ್‌ವರೆಗೆ ಚಿತ್ರಕಲೆ, ವೇಷಭೂಷಣ, ಗೀತಾಪಾರಾಯಣ, ಕಂಠಪಾಠ, ರಸಪ್ರಶ್ನೆ ಮತ್ತು ಲೇಖನ ಸ್ಪರ್ಧೆಗಳನ್ನು ನಡೆಸಲಾಯಿತು. ಇದರಲ್ಲಿ ಸುಮಾರು ೧,೩೦೦ ವಿದ್ಯಾರ್ಥಿ ವಿದ್ಯಾರ್ಥಿನಿಯರು ಭಾಗವಹಿಸಿದ್ದರು. ಇದರ ಅಂಗವಾಗಿ ಜನವರಿ ೫ರಂದು ಏರ್ಪಡಿಸಿದ್ದ ವಿಶೇಷ ಬಹುಮಾನ ವಿತರಣೆ ಕಾರ್ಯಕ್ರಮದಲ್ಲಿ ಆ ಬಹುಮಾನಗಳನ್ನೂ ಭಾಗವಹಿಸಿದ ಪ್ರತಿಯೊಬ್ಬರಿಗೂ ಪ್ರಮಾಣಪತ್ರಗಳನ್ನೂ ವಿತರಿಸಲಾಯಿತು.

ಸ್ವಾಮಿ ವಿವೇಕಾನಂದರ ಜನ್ಮದಿನದ ಅಂಗವಾಗಿ ಬಡಹಳ್ಳಿಜನರಿಗೆ, ಸುಮಾರು ೭೦ ಸಾವಿರ ರೂಪಾಯಿಗಳ, ೫೦೦ ಧೋತಿ, ೫೦೦ ಸೀರೆ, ೨೦೦ ಕಂಬಳಿಗಳನ್ನು ಆಶ್ರಮದಲ್ಲಿ ಹಾಗೂ ಶಿವನಹಳ್ಳಿ ಮತ್ತು ನೆಲಮಂಗಲಗಳಲ್ಲಿ ವಿತರಿಸಲಾಯಿತು. ಜನವರಿ ೨೮ರಂದು ಟಿ.ಸಿ.ಹೆಚ್ ಕಾಲೇಜಿನ ೧೨೦ ವಿದ್ಯಾರ್ಥಿಗಳಿಗೆ ಆಶ್ರಮದಲ್ಲಿ ಒಂದು ವಿಶೇಷ ಸತ್ಸಂಗವನ್ನು ಏರ್ಪಡಿಸಲಾಗಿತ್ತು.

ಫೆಬ್ರುವರಿ ೭ರಂದು ೭ನೇ ತರಗತಿಯ ವಿದ್ಯಾರ್ಥಿಗಳಿಗೆ "ಪರೀಕ್ಷೆಗೆ ಹೇಗೆ ಸಿದ್ಧತೆ ಮಾಡಿಕೊಳ್ಳುವುದು" ಎನ್ನುವುದರ ಬಗ್ಗೆ ಒಂದು ದಿನದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಇದರಲ್ಲಿ ಸುಮಾರು ೨೬೪ ವಿದ್ಯಾರ್ಥಿಗಳು ಭಾಗವಹಿಸಿದ್ದರು.

### ಪರಿಹಾರಕಾರ್ಯ

ಅಲಸೂರಿನ ವಿವೇಕಾನಂದ ಆಶ್ರಮದಿಂದ ಬರಗಾಲ ಪೀಡಿತ ಪ್ರದೇಶವಾದ ಕನಕಪುರದ ಗುಲ್ಲಟಿಕಾವಲ್ ಹಳ್ಳಿಯಲ್ಲಿ ಸುಮಾರು ೧೦೦ ೧೨೦ ದನಕರುಗಳಿಗೆ ಮೇವು ಹಂಚುವ ಕಾರ್ಯಕ್ರಮವನ್ನು ಆರಂಭಿಸಲಾಗಿದೆ. ೪೦ ಸಾವಿರ ರೂನಷ್ಟು ಮೇವನ್ನು ಈಗಾಗಲೇ ಹಂಚಲಾಗಿದೆ. ೪ ತಿಂಗಳ ಕಾಲವಾದರೂ ಈ ಕೆಲಸ ಮುಂದುವರೆಯಬೇಕಾಗಿದೆ. ಅಲ್ಲದೆ ಈ ಕಾರ್ಯವನ್ನು ಇನ್ನೂ ಹೆಚ್ಚಿನ ಹಳ್ಳಿಗಳಿಗೆ ವಿಸ್ತರಿಸಬೇಕಾಗುತ್ತದೆ. ಇದೆಲ್ಲಾ ಕಾರ್ಯಕ್ಕೆ ಸುಮಾರು ೪೦ ಲಕ್ಷ ರೂಪಾಯಿ ಖರ್ಚಾಗುತ್ತದೆ. ಇದಕ್ಕೆ ಉದಾರವಾಗಿ ಸೇವಾಭಿಮಾನಿಗಳು ಧನಸಹಾಯ ನೀಡಬೇಕೆಂದು ಮನವಿ.

### ತಿದ್ದುಪಡಿಗಳು

"ವಿವೇಕಪ್ರಭ"ದ ೨೦೦೩ ಫೆಬ್ರುವರಿ ಸಂಚಿಕೆಯ ೩೫ನೇ ಪುಟದಲ್ಲಿ ಬರುವ ಡಿ.ವಿ.ಜಿಯವರ ಪದ್ಯವು "ಮಂಕುತಿಮ್ಮನ ಕಗ್ಗ"ದಿಂದಲ್ಲ, "ಮರುಳ ಮುನಿಯನ ಕಗ್ಗ"ದಿಂದ. ಪದ್ಯವನ್ನು ಈ ಕೆಳಗಿನಂತೆ ಓದಬೇಕಾಗಿ ವಿನಂತಿ"

ಮೊದಲು ನಾನೆನಗೆ ಮೊದಲೂಟ ಮೊದಲಿನ ಪೀಠ
ಮೊದಲು ನಾನೆನ್ನವರು ಬಳಿಕ ಉಳಿದವರು ।
ಇದು ಲೋಕದೆಲ್ಲ ಕಲಹಗಳ ದುಃಖದ ಮೂಲ
ಅದುಮಿಕೊ ಅಹಂತೆಯನು—ಮರುಳ ಮುನಿಯ ॥

ಈ ಪ್ರಮಾದಕ್ಕಾಗಿ ವಿಷಾದಿಸುತ್ತೇವೆ.

೨೦೦೩ರ ಫೆಬ್ರವರಿ ಸಂಚಿಕೆ, ಪುಟ ೧ರಲ್ಲಿ ಮುಖಪುಟದ ವಿವರಣೆ ತಪ್ಪಾಗಿ ಮುದ್ರಿತವಾಗಿತ್ತು. ಅದನ್ನು ಬಹುತೇಕ ಪ್ರತಿಗಳಲ್ಲಿ ಸ್ಟಿಕರ್ ಲೇಬಲ್ ಅಂಟಿಸಿ ಸರಿಪಡಿಸಲು ಯತ್ನಿಸಿದ್ದೆವು. ಕೆಲವು ಪ್ರತಿಗಳಲ್ಲಿ ಈ ದೋಷ ಉಳಿದುಕೊಂಡಿದೆ. ಈ ಮುದ್ರಣ ದೋಷಕ್ಕಾಗಿ ವಿಷಾದಿಸುತ್ತೇವೆ. ಆ ಸಂಚಿಕೆಯ ಮುಖಪುಟದ ಸರಿಯಾದ ವಿವರಣೆ ಹೀಗಿದೆ:
ಬೇಲೂರು ಮಠದಲ್ಲಿರುವ ಸ್ವಾಮಿ ಬ್ರಹ್ಮಾನಂದರ ಮಂದಿರ.

Managing Editor: Swami Atmavidananda
Editor: Swami Nityasthananda
Printed by Sri J. B. Pattabhi and Published by Swami Atmavidananda, on behalf of Sri Ramakrishna Ashrama, Yadavagiri, Mysore and Printed at Pattabi Enterprises, Ramavilasa Road, Mysore and published at Sri Ramakrishna Ashrama, Yadavagiri, Mysore